ಈ) ಸರ್ವೆ ಮತ್ತು ತನಿಖಾ ಕಾರ್ಯ ಮುಗಿದ ನಂತರ, ಈ ಯೋಜನೆಗಳ ಸಾಧ್ಯತೆಯ ಕಾರ್ಯದ ಬಗ್ಗೆ ಪರಿಶೀಲಿಸಲಾಗುವುದು.

ತರೀಕೆರೆ ತಾಲ್ಲೂಕಿನಲ್ಲಿ ನೀರಾವರಿ ಯೋಜನೆ

5078 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತರೀಕೆರೆ ತಾಲ್ಲೂಕಿನ ಬರಗೇನಹಳ್ಳಿ ಮತ್ತು ಹರುವನಹಳ್ಳಿ ಮತ್ತು ಶಾಂತಿಪುರ ಪಿಕಪ್‌ಗಳು ಮತ್ತು ಕಾಲುವೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಯಾವುವು?*

ಆ) *ಈ ಕಾಲುವೆ ಹಾಗೂ ಪಿಕಪ್‌ಗಳು ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಈ ಯೋಜನೆಯ ಅಂದಾಜು ವೆಚ್ಚ ಮತ್ತು ನಕ್ಷೆ ತಯಾರು ಮಾಡಲಾಗಿದೆಯೇ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬರಗೇನಹಳ್ಳಿಯಲ್ಲಿ ಪಿಕಪ್ ಇರುವುದಿಲ್ಲ ಹರುವನಹಳ್ಳಿ ಪಿಕಪ್ ನಿರ್ಮಾಣ ಕಾಮಗಾರಿಗೆ ಅನುದಾನ ಲಭ್ಯವಿಲ್ಲದೆ ಇರುವ ಕಾರಣ ಕೈಗೆತ್ತಿಗೊಳ್ಳಲು ಸಾಧ್ಯವಾಗಿರುವುದಿಲ್ಲ. ಶಾಂತಿಪುರ ಪಿಕಪ್ ಮತ್ತು ಕಾಲುವೆಗಳ ದುರಸ್ತಿಗಾಗಿ ರೂ.5.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಆ) ಬಂದಿದೆ. ಶಾಂತಿಪುರ ಪಿಕಪ್ ಮತ್ತು ಕಾಲುವೆಗಳ ದುರಸ್ತಿಗಾಗಿ ರೂ. 5.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಹರುವನಹಳ್ಳಿ ಪಿಕಪ್ ನಿರ್ಮಾಣ ಕಾಮಗಾರಿಗೆ 2000-01ನೇ ಸಾಲಿನ ಆಯವ್ಯಯದಲ್ಲಿ ಶೇಕಡ 30ರಷ್ಟು ಅನುದಾನ ಲಭ್ಯವಿಲ್ಲದ ಕಾರಣ ಅಂದಾಜನ್ನು ತಯಾರಿಸಿರುವುದಿಲ್ಲ.

ತರೀಕೆರೆ ತಾಲ್ಲೂಕು ಗುಡ್ಡದ ಮಲ್ಲನ ಕೆರೆಗೆ ಭದ್ರಾ ನೀರು

5079 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾ ಜಲಾಶಯದ ಮೂಲಕ ತರೀಕೆರೆ ತಾಲ್ಲೂಕು ಗುಡ್ಡದ ಮಲ್ಲದ ಕೆರೆಗೆ ನೀರು ಒದಗಿಸಿ ಗ್ರಾಮಾಂತರ ಪ್ರದೇಶಗಳಿಗೆ ನೀರು ಕೊಡಲು ಸರ್ಕಾರ ಅನುಮತಿ ನೀಡಿದೆಯೇ?*

ಆ) *ಹಾಗಿದ್ದಲ್ಲಿ ಎಷ್ಟು ಕ್ಯೂಸೆಕ್ಸ್ ನೀರನ್ನು ತೆಗೆದುಕೊಳ್ಳಲು ಅನುಮತಿ ನೀಡಿದೆ?*

ಇ) *ಈ ಕಾಮಗಾರಿ ಅಂದಾಜು ಮತ್ತು ನಕ್ಷೆ ಆಗಿದೆಯೇ? ಅಂದಾಜು ಮೊತ್ತ ಎಷ್ಟು?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ನೀಡಿದೆ.

ಅ) ನಾಲ್ಕು ಕ್ಯೂಸೆಕ್ಸ್ ನೀರನ್ನು ತೆಗೆದುಕೊಳ್ಳಲು ಅನುಮತಿ ನೀಡಿದೆ.

ಇ) ಈ ಕಾಮಗಾರಿಯು ಚಿಕ್ಕಮಗಳೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಈ ಪ್ರಶ್ನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಬೆಂಗಳೂರು ನಗರದಲ್ಲಿ ರಸ್ತೆಗೆ ಅಡ್ಡಲಾಗಿ ನಿರ್ಮಿಸಿರುವ ಚರಂಡಿಗಳು

5081 - ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ರಸ್ತೆಗೆ ಅಡ್ಡಲಾಗಿ ಕಟ್ಟುವ ಮೋರಿ (ಕಲ್ವರ್ಟ್) ಅಗಲಗೊಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು?

ಆ) ಮೋರಿ ವಿಸ್ತಾರಗೊಳಿಸುವ ಪ್ರತಿಯೊಂದರ ಅಂದಾಜು ವೆಚ್ಚ ಎಷ್ಟು? (ಪ್ರತ್ಯೇಕ ವಿವರ ನೀಡುವುದು)

ಇ) ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ ಮತ್ತು ಯಾವಾಗ ವಹಿಸಲಾಗಿದೆ?

ಈ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು. ಈ ಕೆಳಕಂಡ 3 ರಸ್ತೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1. ಹೊಸೂರು ರಸ್ತೆ (ಆಡುಗೋಡಿ ಹತ್ತಿರ)
2. ಕಾಡುಗೊಂಡನಹಳ್ಳಿ ಶಾಂಪುರ ರಸ್ತೆ
3. ಬನ್ನೇರುಘಟ್ಟ ರಸ್ತೆ 2

ಆ) 1. ಹೊಸೂರು ರಸ್ತೆ ರೂ. 45 ಲಕ್ಷಗಳು

2. ಕಾಡುಗೊಂಡನಹಳ್ಳಿ ಶಾಂಪುರ ರಸ್ತೆ ರೂ. 15 ಲಕ್ಷಗಳು

3. ಬನ್ನೇರುಘಟ್ಟ - 2 ಬಾಂಡ್ ಯೋಜನೆಯ ರಸ್ತೆಯ ಅಭಿವೃದ್ಧಿ ಅಡಿಯಲ್ಲಿ

ಇ) 1. ಹೊಸೂರು ರಸ್ತೆ ಮೆ. ಮೆಕಾನ್ ಸೆಪ್ಟೆಂಬರ್, 2000

2. ಬನ್ನೇರುಘಟ್ಟ -2 ಮೆ. ಅಟ್ಲಾಂಟ

3. ಕಾಡುಗೊಂಡನಹಳ್ಳಿ ಶಾಂಪುರ ರಸ್ತೆ ಶ್ರೀ ಸೂರ್ಯಪ್ರಕಾಶ್ ಅಕ್ಟೋಬರ್, 2000

ಈ) ಡಿಸೆಂಬರ್, 2000ರ ಅಂತ್ಯಕ್ಕೆ.